ಕರ್ನಾಟಕ ಸರ್ಕಾರ

# ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–560001

ಸಂಖ್ಯೆ:–ಸಿ3(7)ಪ್ರಾ.ಶಿ.ವರ್ಗ 01/2016–17 ದಿ: 15/10/2016

## ಜ್ಞಾಪನ

ವಿಷಯ: 2016–17 ನೇ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ಕೋರಿಕೆ ಮೇರೆಗೆ ಕೌನ್ಸಿಲಿಂಗ್ ಮೂಲಕ ಅಂತರ್‌ಘಟಕ ವರ್ಗಾವಣೆ ಬಗ್ಗೆ:

******

**ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಸಹಶಿಕ್ಷಕರ ಅಂತರ ಘಟಕ – ವರ್ಗಾವಣೆ ಕೌನ್ಸಿಲಿಂಗ್ ವೇಳಾಪಟ್ಟಿ**

| ಕ್ರ ಸಂ | ದಿನಾಂಕ | ಅಂತಿಮ ಆದ್ಯತಾ ಪಟ್ಟಿಯಲ್ಲಿರುವ ಕ್ರಮಸಂಖ್ಯೆಗಳಂತೆ |
|---|---|---|
| 1 | 17/10/2016 ಸೋಮವಾರ | 4201 ರಿಂದ 4500 ರವರೆಗಿನ **ಪ್ರಾಥಮಿಕ ಶಾಲಾ** ಸಹಶಿಕ್ಷಕರು ( ನಾಲ್ಕು ವಿಭಾಗಗಳು ಸೇರಿ) |
| | | 3501 ರಿಂದ 3602 ರವರೆಗಿನ **ಪ್ರೌಢಶಾಲಾ** ಸಹಶಿಕ್ಷಕರು ( ನಾಲ್ಕು ವಿಭಾಗಗಳು ಸೇರಿ)<br>1 ರಿಂದ 150 ರವರೆಗಿನ **ಪ್ರೌಢಶಾಲಾ** ದೈಹಿಕ ಶಿಕ್ಷಕರು ( ನಾಲ್ಕು ವಿಭಾಗಗಳು ಸೇರಿ) |
| 2 | 18/10/2016 ಮಂಗಳವಾರ | 4501 ರಿಂದ 4800 ರವರೆಗಿನ **ಪ್ರಾಥಮಿಕ ಶಾಲಾ** ಸಹಶಿಕ್ಷಕರು ( ನಾಲ್ಕು ವಿಭಾಗಗಳು ಸೇರಿ) |
| | | 151 ರಿಂದ 384 ರವರೆಗಿನ **ಪ್ರೌಢಶಾಲಾ** ದೈಹಿಕ ಶಿಕ್ಷಕರು ( ನಾಲ್ಕು ವಿಭಾಗಗಳು ಸೇರಿ) |
| 3 | 19/10/2016 ಬುಧವಾರ | 4801 ರಿಂದ 5100 ರವರೆಗಿನ **ಪ್ರಾಥಮಿಕ ಶಾಲಾ** ಸಹಶಿಕ್ಷಕರು ( ನಾಲ್ಕು ವಿಭಾಗಗಳು ಸೇರಿ) |
| | | 1 ರಿಂದ 285 ರವರೆಗಿನ **ಪ್ರೌಢಶಾಲಾ ವಿಶೇಷ** ಶಿಕ್ಷಕರು ( ನಾಲ್ಕು ವಿಭಾಗಗಳು ಸೇರಿ) |

**ಪ್ರೌಢಶಾಲೆಯ ಕೌನ್ಸಿಲಿಂಗ್ ಮುಗಿದ ನಂತರ ದಿನಾಂಕ 20/10/2016ರಿಂದ ಪ್ರಾಥಮಿಕ ಶಾಲಾ ಮುಖ್ಯಶಿಕ್ಷಕರ ಮತ್ತು ದೈಹಿಕ ಶಿಕ್ಷಕರ ಕೌನ್ಸಿಲಿಂಗನ್ನು ಹಮ್ಮಿಕೊಳ್ಳಲಾಗುವುದು**

## ಕೌನ್ಸಿಲಿಂಗ್ ನಡೆಯುವ ಸ್ಥಳ:

**1. ಬೆಂಗಳೂರು ವಿಭಾಗ – ಶಿಕ್ಷಕರ ಸದನ, ಕೆಂಪೇಗೌಡ ರಸ್ತೆ, ಬೆಂಗಳೂರು –02**
**2. ಮೈಸೂರು ವಿಭಾಗ – ಸಹನಿರ್ದೇಶಕರ ಕಛೇರಿ , ಸಾ.ಶಿ.ಇಲಾಖೆ, ರಾಮಸ್ವಾಮಿ ಸರ್ಕಲ್, ಮೈಸೂರು**
**3. ಕಲಬುರ್ಗಿ ವಿಭಾಗ – ಅಪರ ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ ಕಲಬುರ್ಗಿ.**
**4. ಬೆಳಗಾವಿ ವಿಭಾಗ – ಅಪರ ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ, ಡಯಟ್ ಸಭಾಂಗಣ, ಧಾರವಾಡ .**
**ಬೆಳಿಗ್ಗೆ: 09–30 ರಿಂದ ಪ್ರಾರಂಭ.**

**ಕೌನ್ಸಿಲಿಂಗ್‌ನಲ್ಲಿ ಹಾಜರಾಗುವ ಶಿಕ್ಷಕರುಗಳು ಬಿ.ಇ.ಓ ಇವರಿಂದ ಅನುಮೋದಿತ ಪ್ರತಿ ಪ್ರಕರಣಕ್ಕೆ ಸಂಬಂಧಿಸಿದ ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸುವುದು.**

1. ವರ್ಗಾವಣೆಯ ಅರ್ಜಿ ಬಿ.ಇ.ಓ ಅನುಮೋದಿತ ಪ್ರತಿ ಮತ್ತು ಸೇವಾ ದೃಢೀಕರಣ ಪತ್ರ.
2. ವೈದ್ಯಕೀಯ ಮತ್ತು ಅಂಗವಿಕಲ ಆದ್ಯತೆಯನ್ನು ಕೋರಿರುವ ಶಿಕ್ಷಕರು ಸಂಬಂಧಪಟ್ಟಂತೆ ಅವರ ಜಿಲ್ಲೆಯ ವೈದ್ಯಕೀಯ ಮಂಡಳಿಯ ಪ್ರಮಾಣ ಪತ್ರ ಮತ್ತು ಸಂಬಂಧಪಟ್ಟ ಬಿ.ಇ.ಓ / ಉಪನಿರ್ದೇಶಕರಿಂದ ವೈದ್ಯಕೀಯ ವೆಚ್ಚದ ಮರುಪಾವತಿ ಪಡೆದ ಬಗ್ಗೆ ದೃಢೀಕರಣಪತ್ರ.
3. ನೇಮಕಾತಿ ಆದೇಶ ಪತ್ರ ಮತ್ತು ಕಳೆದ ಬಾರಿ ವರ್ಗಾವಣೆ ಪಡೆದಿದ್ದಲ್ಲಿ ವರ್ಗಾವಣಾ ಆದೇಶದ ಪ್ರತಿ.
4. ಶಿಕ್ಷಕರ ಇತ್ತೀಚಿನ ಹೆಚ್.ಆರ್. ಎಂ.ಎಸ್ ವೇತನ ಪತ್ರ.
5. ಗುರುತಿನ ಪತ್ರ , ಮತದಾರರ ಚೀಟಿ, ಆಧಾರ್ ಕಾರ್ಡ್
6. ವರ್ಗಾವಣೆ ಅಧಿನಿಯಮ ಜಾರಿಗೆ ಬಂದನಂತರ ಇದೇ ಮೊದಲನೇ ಬಾರಿಗೆ ಘಟಕದ ಹೊರಗೆ ವರ್ಗಾವಣೆ ಪಡೆಯುತ್ತಿದ್ದೇನೆ ಎಂಬ ಬಗ್ಗೆ ಮುಚ್ಚಳಿಕೆ ಪತ್ರ
7. **ವಿಧವಾ ಪ್ರಕರಣ –––** ಪತಿಯ ಮರಣ ಪ್ರಮಾಣ ಪತ್ರ.
8. **ಪತಿ/ಪತ್ನಿ ಅನುಧಾನಿತ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಲ್ಲಿ ಹೆಚ್**.ಆರ್.ಎಂ.ಎಸ್ ವೇತನ ಪತ್ರ.
9. **ಸೈನಿಕ ಪ್ರಕರಣಗಳಲ್ಲಿ ಸಂಬಂಧಿಸಿದ ಪ್ರಾಧಿಕಾರ ನೀಡಿರುವ ಮೂಲ ಗುರುತಿನ ಚೀಟಿ ಮತ್ತು ಸೇವಾ ದೃಢೀಕರಣ ಪತ್ರ.**
10. **ಶಿಕ್ಷಕರ ಸಂಘದ/ಸರ್ಕಾರಿ ನೌಕರರ ಸಂಘದ ಚುನಾಯಿತ ಪ್ರತಿನಿಧಿಯಾಗಿದ್ದಲ್ಲಿ ಮಾತ್ರ ಸಂಬಂಧಪಟ್ಟ ಪ್ರಾಧಿಕಾರ ನೀಡಿರುವ ಪ್ರಮಾಣ ಪತ್ರ. ಶಿಕ್ಷಕರು ಯಾವ ಘಟಕದಲ್ಲಿ ಚುನಾಯಿತರಾಗಿದ್ದಾರೆಂಬ ಬಗ್ಗೆ ದೃಢೀಕರಣ ಪತ್ರ.**
11. ಪತಿ–ಪತ್ನಿಯ ಸಂಬಂಧ ಸೂಚಿಸುವ ದಾಖಲೆ (ನಾಮನಿರ್ದೇಶನ, ಮತದಾರರ ಚೀಟಿ, ಆಧಾರ್ ಕಾರ್ಡ್)
12. ಕೆ.ಎ.ಟಿ ಯಿಂದ ಮಧ್ಯಂತರ ಆದೇಶವನ್ನು ಪಡೆದಿರುವ ಎಸ್.ಎಸ್.ಎ ಸಹಶಿಕ್ಷಕರು/ಎಸ್.ಎಸ್.ಎ–ಟಿ.ಜಿ.ಟಿ ಶಿಕ್ಷಕರು ಕೌನ್ಸಿಲಿಂಗ್‌ನಲ್ಲಿ ಭಾಗವಹಿಸುವಾಗ ನ್ಯಾಯಾಲಯದ ಆದೇಶದ ದೃಢೀಕೃತ ಪ್ರತಿಯನ್ನು ಹಾಜರುಪಡಿಸುವುದು.

ಸಹಿ/–
(ಕೆ. ಆನಂದ )
**ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)**
ಹಾಗೂ ರಾಜ್ಯ ಮಟ್ಟದ ವರ್ಗಾವಣಾ ಪ್ರಾಧಿಕಾರಿಗಳು,